ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ತಮಗೆ ಯಾರೇ ಪತ್ರ ಬರೆದರೂ ಅವರ ರಕ್ಷಣೆ ಮಾಡಿರಬೇಕು. ಅವರು ಮಂತ್ರಿಗಳಾಗಲಿ, ಅಧಿಕಾರಿಗಳಾಗಲಿ, ಇದು ಸಂಪ್ರದಾಯ. ಅದು ಬಿಟ್ಟು ಅವರ ಅಪ್ತಕಾರ್ಯದರ್ಶಿಗಳು ತಮಗೆ ಪತ್ರ ಬರೆಯುತ್ತಾರೆಂದರೆ ಇದು ಏನು ಸ್ವಾಮಿ? ಇದನ್ನು ತಾವು ಒಪ್ಪಿಕೊಳ್ಳುತ್ತೀರಾ? ಮಾನ್ಯ ಮಂತ್ರಿಗಳು ಈ ಸದನಕ್ಕೆ ಬಂದು ಉತ್ತರ ನೀಡುವುದು ಅವರ ಕರ್ತವ್ಯವಲ್ಲವೇ?

ಅಧ್ಯಕ್ಷರು : ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ ತಾವು ಕಠಿಣ ಪದಗಳನ್ನು ಬಳಸಿ ಸರ್ಕಾರಕ್ಕೆ ತಿಳಿ ಹೇಳಬೇಕು.

ಅಧ್ಯಕ್ಷರು : ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಿ. ಈಗ ಮಾನ್ಯ ಶ್ರೀ ಬಿ. ಸೋಮಶೇಖರ್ ಮತ್ತು ಸಿ. ಬೈರೇಗೌಡ ಪಿಜಿಆರ್ ಸಿಂಧ್ಯಾ ಮತ್ತಿತರರು ಮಂಡಿಸಿರುವ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ವಿಷಯ : (ಆ) ಬ್ಯಾಕ್‌ಲಾಗ್ ಹುದ್ದೆ ತುಂಬುವ ಆದೇಶವನ್ನು ಅನುಷ್ಠಾನಕ್ಕೆ ತರದಿರುವ ಬಗ್ಗೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಸಂಬಂಧಪಟ್ಟಂತೆ 1978ರಲ್ಲಿ ಮೊಸಲಾತಿಯನ್ನು ಒದಗಿಸಲು ಒಂದು ಆರ್ಡರ್ ಮಾಡಿದರು. ಮತ್ತೆ 1997ರಲ್ಲಿ ಒಂದು ಮೊಸಲಾತಿ ಆರ್ಡರ್‌ನ್ನು ಮಾಡಿದರು. ಇದನ್ನು ಅನುಷ್ಠಾನಕ್ಕೆ ತರದೇ ಸಾವಿರಾರು ಹುದ್ದೆಗಳನ್ನು ತುಂಬಲಿಕ್ಕೆ ಆಗಲಿಲ್ಲ. ಆದಕ್ಕೆ ಈಗ ಕೆಲವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ತಮ್ಮ ಅನುಮತಿ ಕೋರಿ ಮಾಡುತ್ತಿದ್ದೇನೆ.

1. ನೇರ ನೇಮಕಾತಿಯಲ್ಲಿ ಬ್ಯಾಕ್‌ಲಾಗ್ : ನೇರ ನೇಮಕಾತಿಯಲ್ಲಿ ಬ್ಯಾಕ್‌ಲಾಗಿನ ಕುರಿತು ದಿನಾಂಕ: 12-07-1989ರ ಆದೇಶ ಸಂಖ್ಯೆ: ಡಿಪಿಎಆರ್ 19 ಎಸ್‌ಬಿಸಿ 89ರಲ್ಲಿ ಸೂಚನೆಗಳನ್ನು ನೀಡಲಾಗಿದೆ. ಆ ಆದೇಶದ ಕಂಡಿಕೆ 1ರನ್ವಯ, ನೇರ ನೇಮಕಾತಿಯಲ್ಲಿ ಬ್ಯಾಕ್‌ಲಾಗ್ ಎನ್ನುವುದನ್ನು ಈ ಕೆಳಗೆ ಉದ್ಧರಿಸಿದಂತೆ ವ್ಯಾಖ್ಯಾನಿಸಲಾಗಿದೆ:-

"1. The vacancies respectively classified for Scheduled Castes and Scheduled Tribes but not filled by appointment from each of such categories due to non-availability of candidates belonging to Scheduled Castes/ Scheduled Tribes in all the direct recruitments made on or after 1st January, 1986 so far, shall be

categoriesed as backlog..." ಮುಂದುವರೆದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗಾಗಿ ನೇರ ನೇಮಕಾತಿಯಲ್ಲಿ ಮೀಸಲಿಡಲಾದ ರಿಕ್ತ ಸ್ಥಾನಗಳನ್ನು ಮೀಸಲೇತರವೆಂದು ಮಾಡುವುದನ್ನು ಸದರಿ ಆದೇಶದ ಕಂಡಿಕೆ 4ರನ್ವಯ ನಿಷೇಧಿಸಲಾಗಿದೆ.

2. ಬಡ್ತಿಯಲ್ಲಿ ಬ್ಯಾಕ್‌ಲಾಗ್ : ಬಡ್ತಿಯಲ್ಲಿ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದ ಆಸ್ಪದವನ್ನು ದಿನಾಂಕ: 1-4-1992ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಆರ್‌ಆರ್ 92ರ ಮೂಲಕ ಕಲ್ಪಿಸಲಾಗಿದ್ದು, ಆದರ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ದರಿಸಿದೆ:-

"Provided that, notwithstanding anything in the rules of Recruitment specially made in respect of any service or post, the backlog vacancies in the Promotional quota shall be determined and implemented with effect from 27th April, 1978.

**NOTE :** The backlog vacancy means the extent of the number of vacancies available under the roster system upto the level of lowest category in Group-'A' post calculated from 27th April, 1978."

ಸದರಿ ಆಸ್ಪದವನ್ನು ಅಂದರೆ, ಬಡ್ತಿಯಲ್ಲಿ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದ ಆಸ್ಪದವನ್ನು ಕಾರ್ಯಗತಗೊಳಿಸುವ ಬಗ್ಗೆ ಸುಪ್ರೀಂ ಕೋರ್ಟು ಭಕ್ತ ರಾಮೇಗೌಡ ಪ್ರಕರಣದಲ್ಲಿ (1997(2) ಎಸ್‌ಸಿಸಿ 661) ನೀಡಿದ ತೀರ್ಮಾನದಂತೆ ಅಗತ್ಯ ಮಾರ್ಗಸೂಚಿಗಳನ್ನು ದಿನಾಂಕ: 24-6-1997ರ ಆದೇಶ ಸಂಖ್ಯೆ: ಸಿಆಸುಇ 10 ಸೆಹಿಮ 97ರಲ್ಲಿ ನೀಡಲಾಗಿದೆ. ನಂತರ, ದಿನಾಂಕ: 3-2-99ರ ಆದೇಶ ಸಂಖ್ಯೆ: ಸಿಆಸುಇ 21 ಸೆಹಿಮ 97 ಹಾಗೂ ತದನಂತರದ ದಿನಾಂಕ: 13-4-1999ರ ಆದೇಶಗಳನ್ನು ಹೊರಡಿಸಲಾಗಿದೆ. ದಿನಾಂಕ:24-6-1997ರ ಮೇಲೆ ಉಲ್ಲೇಖಿಸಿದ ಸರ್ಕಾರಿ ಆದೇಶದಲ್ಲಿ ಒಳಗೊಂಡ, ಬ್ಯಾಕ್‌ಲಾಗ್ ಅನ್ನು ಕ್ಲಿಯರ್ (clear) ಮಾಡುವುದಕ್ಕೆ ಸಂಬಂಧಿಸಿದ ಆಸ್ಪದವನ್ನು ವಾಕಿ ಇರುವ ಬ್ಯಾಕ್‌ಲಾಗ್ ಅನ್ನು ಕ್ಲಿಯಲ್ ಮಾಡುವವರೆಗೆ ಉಪಯೋಗಿಸಿಕೊಳ್ಳಲು ದಿನಾಂಕ:13-4-1999ರ ಸದರಿ ಆದೇಶದಲ್ಲಿ ಆಸ್ಪದ ಇರುತ್ತದೆ. ದಿನಾಂಕ: 13-4-1999ರ ಆ ಆದೇಶದ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ದರಿಸಿದೆ:-

"Promotion of the persons belonging to the Scheduled Castes and the Scheduled Tribes against backlog shall be continued to be accorded in accordance with the Government Order dated: 24-6-1997....."

The provisions of the Government Order dated: 24-6-1997.....will continue to operate until the existing

backlog is cleared but while making any promotion thereafter in favour of the persons belonging to the Scheduled Castes or the Scheduled Tribes, their representation shall be maintained to the extent of 15% and 3% respectively of the total working strength."

3. ಸಾಂದರ್ಭಿಕವಾಗಿ ಹೇಳುವುದಾದರೆ, ಸಂವಿಧಾನದ ಎಂಬತ್ತೊಂದನೇ ತಿದ್ದುಪಡಿಯ ಮೂಲಕ ಅನುಚ್ಛೇದ 16 (4ಬಿ)ಯನ್ನು ಜಾರಿಗೆ ತರಲಾಗಿದ್ದು, ಅದನ್ನು ಈ ಕೆಳಗೆ ಉದ್ಧರಿಸಿದೆ:-

"(4B) Nothing in this article shall prevent the State from considering any unifilled vacancies of a year which are reserved for being filled up in that year in accordance with any provision for reservation made under clause (4) or clause (4A) as a separate class of vacancies to be filled up in any succeeding year or years and such class of vacancies shall not be considered together with the vacancies of the year in which they are being filled up for determining the ceiling of fifty percent reservation on total number of vacancies of that year."

ದಿನಾಂಕ: 13-4-1999ರ ಸದರಿ ಆದೇಶ, ಮೇಲೆ ಉದ್ಧರಿಸಿದ ಅನುಚ್ಛೇದ 16 (4ಬಿ)ಗೆ ಅನುಗುಣವಾಗಿರುತ್ತದೆ.

4. ಮೇಲೆ ಉದ್ಧರಿಸಿದ ಅನುಚ್ಛೇದ 16(4-ಬಿ) ವನ್ನು ಆಧರಿಸಿ, ದಿನಾಂಕ: 16-3-2001ರ ಸುತ್ತೋಲೆ ಸಂಖ್ಯೆ: ಸಿಆಸುಇ 15 ಸೆಹಿಮ 2000ವನ್ನು ಹೊರಡಿಸಲಾಗಿದೆ.

5. ಬ್ಯಾಕ್‌ಲಾಗ್‌ಅನ್ನು ತ್ವರಿತವಾಗಿ ಕ್ಲಿಯರ್ ಮಾಡಲು ಕ್ರಮ ತೆಗೆದುಕೊಳ್ಳಲು ವಿವಿಧ ಇಲಾಖೆಗಳಲ್ಲಿನ ನೇಮಕಾತಿ ಪ್ರಾಧಿಕಾರಗಳಿಗೆ ಅಧಿಕಾರ ನೀಡಲಾಗಿದೆ. ಈ ನೇಮಕಾತಿ ಪ್ರಾಧಿಕಾರಗಳು ವಿವಿಧ ಇಲಾಖೆಗಳಲ್ಲಿ ಜಿಲ್ಲಾಮಟ್ಟದಲ್ಲಿ, ವಿಭಾಗೀಯ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಇರುತ್ತಾರೆ. ಬ್ಯಾಕ್‌ಲಾಗ್‌ಗೆ ಸಂಬಂಧಿಸಿದ ಮೇಲೆ ವಿವರಿಸಲಾದ ಆಸ್ಪದಗಳನ್ನು ಯಾವುದೇ ನೇಮಕಾತಿ ಪ್ರಾಧಿಕಾರ ಯಾವುದೇ ನಿರ್ದಿಷ್ಟ ಪ್ರಕರಣಗಳಲ್ಲಿ ಜಾರಿಗೊಳಿಸದೇ ಇರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಲ್ಲಿ, ಅದರ ಕುರಿತು ಸೂಕ್ತ ಸೂಚನೆಗಳನ್ನು ನೀಡಲಾಗುವುದು.

ಸಂಖ್ಯೆ: ಸಿಆಸುಇ 04 ಸೆಹಿಮ 2001.

(ಸಹಿ)
(ಎಸ್.ಎಂ. ಕೃಷ್ಣ)
ಮುಖ್ಯ ಮಂತ್ರಿಗಳು.

1. **Backlog in direct recruitment :** So far as backlog in direct recruitment is concerned, instructions have been issued as contained in the Government Order No. DPAR 19 SBC 89 dated: 12-7-1989. According to para 1 of the said Government Order, the term 'backlog' in direct recruitment' has been defined as follows:

"1. The vacancies respectively classified for Scheduled Castes and Scheduled Tribes but not filled by appointment from each of such categories due to non-availability of candidates belonging to Scheduled Castes/Scheduled Tribes in all the direct recruitments made on or after 1st January 1986 so far, shall be categorised as 'backlog'....."

Further, according to para 4 of the said Government Order, dereservation of the vacancies reserved for the candidates belonging to the Scheduled Castes and the Scheduled Tribes in direct recruitment is banned.

2. **Backlog in promotion:** As for backlog in promotion, the provision for the same has been made as per the notification No. DPAR 13 SBC 92 dated: 1-4-1992. The relevant portion of the same is quoted below:

> "Provided that, notwithstanding anything in the rules of recruitment specially made in respect of any service or post, the backlog vacancies in the promotional quota shall be determined and implemented with effect from 27th April, 1978.
>
> **NOTE:** The backlog vacancy means the extent of the number of vacancies available under the roster system upto the level of lowest category in Group-A posts calculated from 27th April, 1978."

According to the judgement of the Supreme Court in the case of Bhaktarame Gowda (1997 (2) SCC 661) necessary guidelines have been issued with regard to implementing the said provision relating to backlog in promotion as per the Govt. Order No. DPAR 10 SBC 97 dated: 24-6-1997. Subsequently, the Govt. Order No. DPAR 21 SBC 97 dated: 3-2-1999 and the Govt. Order dated: 13-4-1999 have been issued. According to the said Govt. order dt:13-4-99, the Govt. order dt: 24-6-97, referred above, providing for clearing the backlog, can be operated until all the existing backlog is cleared. The relevant portion of the said Govt. Order dt: 13-4-99 is quoted below:

"Promotion of the persons belonging to the Scheduled Castes and the Scheduled Tribes against backlog shall be continued to be accorded in accordance with Govt. Order dt: 24-6-1997,.....

The provisions of the Govt. Order dt: 24-6-1997....., will continue to operate until the existing backlog is cleared but while making any promotion thereafter in favour of the persons belonging to the Scheduled Castes or the Scheduled Tribes, theirepresentation shall be maintained to the extent of 15% and 3 % respectively of the total working strength".

3. Incidentally, it is mentioned that Article 16(4B) was introduced by the Constitution eighty-first amendment which is quoted below:

"(4B) Nothing in this Article shall prevent the State from considering any unfilled vacancies of a year which are reserved for being filled up in that year in accordance with any provision for reservation made under clause (4) or clause (4A) as a separate class of vacancies to be filled up in any succeeding year or years and such class of vacancies shall not be considered together with the vacancies of the year in which they are being filled-up for determing the ceiling of fifty percent reservation on total number of vacancies of that year."

The provision contained in the said Government Order dated: 13-4-1999 is in conformity with Article 16(4B) quoted above.

4. Based on the said Article 16(4-B), Circular No. DPAR 15 SBC 2000, dated: 16-3-2001 has been issued.

5. In the interest of expeditiously clearing the backlog, the appointing authorities in the various departments have been empowered to take action. These appointing authorities are there in the various departments at the district level, divisional level and state level. If any specific case of non implementation of the said provisions relating to backlog by any appinting authority comes to the notice of Government, appropriate instructions will be issued with regard to the same.

No. DPAR 04 SBC 2001.

Sd/-

CHIEF MINISTER.

ಮಾನ್ಯ ಅಧ್ಯಕ್ಷರೆ ಈ ವಿಚಾರದಲ್ಲಿ ವಿಳಂಬವಾಗಿದೆ. ಅದಕ್ಕೆ ಕಾರಣವೇನೆಂದರೆ ನಮ್ಮ ಗ್ರಾಮೀಣ ಕೃಪಾಂಕ ನೀಡುವ ವಿಷಯ ಈ ಮಧ್ಯೆ ಬಂತು. ಈ ಗ್ರಾಮೀಣ ಕೃಪಾಂಕಕ್ಕೆ ಸಂಬಂಧಪಟ್ಟ ಹಾಗೆ ನಾವು ಪ್ರತ್ಯೇಕವಾದ ಒಂದು ಕಾನೂನು ತಂದು ಜಾರಿಗೊಳಿಸಿದ್ದೇವೆ. ಆದ್ದರಿಂದ ಈಗ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರಕ್ಕೆ ಯಾವ ಆತಂಕವೂ ಇಲ್ಲ. ಇದರ ಜೊತೆಗೆ ನಾವು ಈಗಾಗಲೇ ಪ್ರತಿಯೊಂದು ಇಲಾಖಾ ಮುಖ್ಯಸ್ಥರಿಗೆ ಸ್ವತಹಃ ನಾನೇ ಪತ್ರ ಬರೆದು ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಇವೆ ಎಂದು ತಿಳಿಸಬೇಕೆಂದು ಕೋರಿದ್ದೇನೆ. ಅದರಲ್ಲಿ ಬಹುತೇಕ ಎಲ್ಲಾ ಇಲಾಖೆಗಳಿಂದ ನಮಗೆ ಮಾಹಿತಿ ಬಂದಿದೆ. ಇನ್ನು 3-4 ಇಲಾಖೆಗಳಿಂದ ನಮಗೆ ಮಾಹಿತಿ ಬರಬೇಕಾಗಿದೆ. ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರ ವಿಶೇಷ ಆಸಕ್ತಿಯನ್ನು ವಹಿಸಿದೆ. ಆ ವರ್ಗದ ಜನರಿಗೆ ಸಾಮಾಜಿಕ ನ್ಯಾಯವನ್ನು ಕೊಡುವ ವಿಚಾರದಲ್ಲಿ ಸರ್ಕಾರದವರು ಅತ್ಯಂತ ತೀವ್ರ ಗಮನವನ್ನು ಹರಿಸಿ ಯುದ್ಧೋಪಾದಿಯಲ್ಲಿ ನೇಮಕಾತಿಯನ್ನು ಮಾಡತಕ್ಕಂಥ ಕೆಲಸವನ್ನು ಖಂಡಿತವಾಗಿ ಮಾಡುತ್ತೇವೆ ಎಂಬ ಮಾತನ್ನು ಗೌರವಾನ್ವಿತ ಸದನಕ್ಕೆ ತಮ್ಮ ಮೂಲಕ ತಿಳಿಸ ಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈ ಬ್ಯಾಕ್‌ಲಾಗ್ ಹುದ್ದೆಗಳು ಹೇಗೆ ಸೃಷ್ಟಿಯಾದವು ಅಂದರೆ, 27-4-1978ರಲ್ಲಿ ಆರ್ಟಿಕಲ್-64ರ ಪ್ರಕಾರ ಪರಿಶಿಷ್ಟ-ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಬಡ್ತಿಯಲ್ಲಿಯೂ ಮೀಸಲಾತಿಯನ್ನು ಕೊಡಬೇಕೆನ್ನುವಂಥ ಆದೇಶವನ್ನು ಅಂದಿನ ಮುಖ್ಯಮಂತ್ರಿಯವರಾಗಿದ್ದ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಹೊರಡಿಸಿದ್ದರು. ಅದರಲ್ಲಿನ ಕ್ಲಾಸ್-6ರಲ್ಲಿ ಏನಿದೆ ಅಂದರೆ, ಒಂದು ವೇಳೆ ಅರ್ಹರಾದಂಥ ಪರಿಶಿಷ್ಟಜಾತಿ ಮತ್ತು ವರ್ಗದ ಅಧಿಕಾರಿಗಳು ಸಿಕ್ಕದೆ ಇದ್ದಲ್ಲಿ ಈ ಹುದ್ದೆಗಳನ್ನು ಸಾಮಾನ್ಯ ವರ್ಗದವರಿಗೆ ಕೊಡಬಹುದೆಂಬ ಕ್ಲಾಸ್‌ನ್ನು ಹಾಕಿದ್ದರು. ಇದನ್ನು ಉಪಯೋಗಿಸಿಕೊಂಡು 1992ರ ವರೆಗೆ ಎಷ್ಟೋ ಬ್ಯಾಕ್‌ಲಾಗ್‌ಗಳು ಉದ್ಭವವಾದವು. ಅಂದರೆ ಸರಿಯಾಗಿ ಸಿಗಬೇಕಾಗಿದ್ದವರಿಗೂ ಒಂದಲ್ಲ ಒಂದು ಕಾರಣದಿಂದ ತಪ್ಪಿಸಿದರು. ಹೀಗೆ ಒಂದು ಕಡೆಯಲ್ಲಿ ಮೀಸಲಾತಿಯನ್ನು ಒದಗಿಸಿಕೊಟ್ಟಿರತಕ್ಕಂಥಾದ್ದು ಮತ್ತೊಂದು ಕಡೆ ಹುದ್ದೆಗಳನ್ನು ತುಂಬಿರತಕ್ಕಂಥಾದ್ದು. ಇದಾದ ಮೇಲೆ 1992ರಲ್ಲಿ ರೂಲ್ಸ್:8ಕ್ಕೆ ಒಂದು ತಿದ್ದುಪಡಿಯನ್ನು ತಂದರು. 1978ರಿಂದ ಇಲ್ಲಿಯವರೆಗೆ ತುಂಬಬೇಕಾಗಿದ್ದ ಹುದ್ದೆಗಳನ್ನು ತುಂಬುವುದಕ್ಕೆ ಆಗಲಿಲ್ಲವೋ, ಅವುಗಳನ್ನು ಭರ್ತಿ ಮಾಡಲು ಪೂರ್ವಾನ್ವಯವಾಗಿ ತುಂಬಿಸಿ ಕೊಳ್ಳುವುದಕ್ಕೆ ಒಂದು ಆದೇಶವನ್ನು ಹೊರಡಿಸಿದರು. ಆ ಅಮೆಂಡ್‌ಮೆಂಟ್‌ನ್ನು ಸಾಮಾನ್ಯವರ್ಗದ ಅಧಿಕಾರಿಗಳು ಕೆಎಟಿಯಲ್ಲಿ ಚಾಲೆಂಜ್ ಮಾಡಿದರು. ಅದರಲ್ಲಿ ನಾನ್ ಅಪರೇಟಿವ್ ಎಂದು ತೀರ್ಮಾನ ಮಾಡಿದರು. ಅದರಲ್ಲಿ ಹೀಗೆ ತೀರ್ಮಾನ ಬಂದ ಮೇಲೆ ಭಕ್ತ ರಾಮೇಗೌಡ ಎಂಬ ಪರಿಶಿಷ್ಟ ವರ್ಗದ ಅಭ್ಯರ್ಥಿಯೊಬ್ಬರು ಸುಪ್ರೀಂಕೋರ್ಟ್‌ಗೆ ಹೋದರು. ಸುಪ್ರೀಂಕೋರ್ಟ್‌ನವರು ಅದನ್ನು ಎತ್ತಿಹಿಡಿದು, ಆರ್ಟಿಕಲ್-309ರ ಪ್ರಕಾರ ಯಾವುದೇ ಒಂದು ಲೆಜಿಸ್ಲೇಟಿವ್ ಅಮೆಂಡ್‌ಮೆಂಟ್‌ನ್ನು ತರುವ ಅಧಿಕಾರವು ಸರ್ಕಾರಕ್ಕೆ ಇದೆ, ಆದ್ದರಿಂದ ಈವರು ಮಾಡಿರುವುದು ಸರಿ, ಅದಕ್ಕಾಗಿ ಸರ್ಕಾರದವರು ಒಂದು ಮಾರ್ಗಸೂಚಿಯನ್ನು ಅಳವಡಿಸಿ,

ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕೆಂಬ ಒಂದು ಆದೇಶವನ್ನು 1996ರಲ್ಲಿ ಹೊರಡಿಸಿದರು. ನಂತರ 1997ರಲ್ಲಿ ನಮ್ಮ ಸರ್ಕಾರ ಬಂದಾಗ ಒಂದು ವ್ಯವಸ್ಥೆಯನ್ನು ಮಾಡಲು ವಿಷಯಗಳನ್ನು ಕ್ರೋಢೀಕರಿಸಿ ಹುದ್ದೆಗಳನ್ನು ಯಾವ ರೀತಿಯಲ್ಲಿ ತುಂಬಬೇಕು, ಬ್ಯಾಕ್‌ಲಾಗ್ ಹುದ್ದೆಗಳನ್ನು ಒಂದೇ ಸಾರಿ ಕೊಡಲು ಆಗುವುದಿಲ್ಲ, ಹಾಗಾಗಿ ಒಂದು ಮಾರ್ಗಸೂಚಿಯನ್ನು ಅಂದು ನಾವು ಕೊಟ್ಟೆವು. 33ರಲ್ಲಿ 6 ಹುದ್ದೆಗಳನ್ನು ಹೀಗೆ ತುಂಬ ಬೇಕೆಂದೇನು ಇತ್ತು, ಅದರ ಬದಲಾಗಿ 6 ಪೋಸ್ಟ್‌ಗಳ ಬದಲಾಗಿ 16 ಪೋಸ್ಟ್‌ಗಳನ್ನು ಈ ರೋಸ್ಟರ್‌ನಲ್ಲಿಯೇ ಅಳವಡಿಸಬೇಕೆಂಬ ಮಾರ್ಗಸೂಚಿ ಮಾಡಿದ್ದೇವೆ. ಆ ಮಾರ್ಗಸೂಚಿಯನ್ನು ಸುಪ್ರೀಂಕೋರ್ಟ್‌ಗೆ ಕೊಟ್ಟು ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಅದೇ ಆದೇಶವನ್ನು 1999ರಲ್ಲಿಯೂ ಕೂಡ ಅದನ್ನೇ ಪುನರುಚ್ಚಾರ ಮಾಡಿ, 13-4-99ರಲ್ಲಿ ಒಂದು ಆದೇಶವನ್ನು ಹೊರಡಿಸಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದಕ್ಕೂ, 15:3 ಪ್ರಮೋಶನ್ ಏನು ಕೊಡುತ್ತೇವಲ್ಲ ಅವುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ, ಆದ್ದರಿಂದ ನಾವು ಆ ಬಗ್ಗೆ ವಿಚಾರವನ್ನು ಅದರಲ್ಲಿಯೂ ಮಾಡಿದ್ದೆವು. ಹಾಗೆಯೇ ಕಳೆದ ಅಧಿವೇಶನದಲ್ಲಿಯೂ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಸ್ತಾಪ ಮಾಡಿದಾಗ ಅವರು ಆ ಕುರಿತು ಆಶ್ವಾಸನೆಯನ್ನು ಕೊಟ್ಟಿದ್ದರು. ಯಾವುದೇ ಕಾರಣಕ್ಕೂ ಬ್ಯಾಕ್‌ಲಾಗ್ ಹುದ್ದೆಗಳನ್ನು ನಾವು ವಿಳಂಬ ಮಾಡದೆ ತುಂಬುತ್ತೇವೆಂದು ಹೇಳಿದ್ದರು. ತಾವುಗಳು ಹೇಳುವ ಹಾಗೆ ರೂರಲ್ ವೈಟೇಜ್‌ಗೂ ಇದಕ್ಕೂ ಯಾವುದೇ ಸಂಬಂಧ ಬರುವುದೇ ಇಲ್ಲ. ಇದಕ್ಕೆ ಬೇಕಾಗುವ ಕಾನೂನು ನಿಯಮಗಳು ಸುಪ್ರೀಂಕೋರ್ಟ್‌ನಿಂದ ಬಂದವುಗಳು. ಗೈಡ್‌ಲೈನ್ಸ್ ರಾಜ್ಯ ಸರ್ಕಾರದವರಿಂದ ನೀಡಲ್ಪಟ್ಟದ್ದು. ರಾಜ್ಯ ಸರ್ಕಾರದವರು ಮಾಡಿದ ಗೈಡ್‌ಲೈನ್ಸ್‌ಗಳನ್ನು ಸುಪ್ರೀಂಕೋರ್ಟ್‌ನವರಿಗೆ ಸಲ್ಲಿಸಲಾಗಿದೆ. ಇಷ್ಟೆಲ್ಲಾ ಆದರೂ ಕೂಡ ಒಂದೂ ಇಲಾಖೆಯಲ್ಲಿ ಈ ಹುದ್ದೆಗಳನ್ನು ತುಂಬುತ್ತಾ ಇಲ್ಲ. ಇವೊತ್ತು ಇದರಿಂದಾಗಿ ರಾಜ್ಯದಲ್ಲಿ ನೂರಾರು ಇಂಜಿನೀಯರಿಂಗ್ ಅಥವಾ ಇನ್ನಾವುದೇ ಪದವೀಧರರು ಮಂತ್ರಿಗಳ ಮನೆಯ ಮುಂದೆ ಉಪವಾಸ ಕುಳಿತಿದ್ದಾರೆ. ಇದು ಮುಂದುವರಿದು ಮೊನ್ನೆಯ ದಿನ 15 ಜನ ವಿದ್ಯಾರ್ಥಿಗಳು ಬಹಳ ತೊಂದರೆಗೊಳಗಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ. ಈಗಾಗಲೇ ದಲಿತ ಸಂಘಟನೆಗಳು ಪ್ರತಿಭಟನೆ ಮಾಡುವ ತನಕವೂ ಪ್ರಕರಣಗಳು ಮುಂದುವರಿದಿವೆ. ಇದರಿಂದಾಗಿ ತುಂಬಾ ಜನರು ಆತಂಕಕ್ಕೊಳಗಾಗಿದ್ದಾರೆ. ಆದ್ದರಿಂದ ಇನ್ನು ಯಾವುದೇ ಕಾರಣಕ್ಕೂ ಮುಂದಕ್ಕೆ ಹಾಕುವುದು ಸರಿಯಲ್ಲ. ಸರ್ಕಾರದವರು ಇದರ ಬಗ್ಗೆ ಒಂದು ಕಾಲಮಿತಿಯನ್ನು ನಿಗದಿಪಡಿಸಬೇಕು. ಸಾವಿರಾರು ಹುದ್ದೆಗಳು ಬ್ಯಾಕ್‌ಲಾಗ್‌ನಲ್ಲಿವೆ. ಇದು ಸಂಬಂಧಪಟ್ಟವರಿಗೆ ನ್ಯಾಯಯುತವಾಗಿ ಸಿಗಬೇಕಾದಂಥಹವುಗಳು. ಒಂದಲ್ಲವೊಂದು ಕಾರಣಗಳಿಂದಾಗಿ ಮುಂದಕ್ಕೆ ಹೋಗುತ್ತಿರುವ ಈ ಹುದ್ದೆಗಳನ್ನು ನಿರ್ದಿಷ್ಟವಾದ ಕಾಲಮಿತಿಯೊಳಗಾಗಿ ಭರ್ತಿ ಮಾಡಬೇಕು. ಇದರಲ್ಲಿ ವಿಳಂಬ ಸಲ್ಲದು. ಬ್ಯಾಕ್‌ಲಾಗ್ ಹುದ್ದೆಗಳಿಗೂ ರೂರಲ್ ರಿಸರ್ವೇಶನ್‌ಗೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ಅಂತಿಮವಾಗಿ ಒಂದು ಕಾಲಮಿತಿ ನಿಗದಿಪಡಿಸಿ ಸರ್ಕಾರದವರು ಯಾವಾಗ ಹುದ್ದೆಗಳನ್ನು ತುಂಬುತ್ತಾರೆ ಎಂಬುದನ್ನು ಸ್ಪಷ್ಟವಾಗಿ ಸದನದಲ್ಲಿ ತಿಳಿಸಬೇಕಾಗಿ ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಇದನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆಂದರೆ, ಗ್ರಾಮೀಣ ಕೃಪಾಂಕದ ವಿಚಾರ ಇತ್ಯರ್ಥವಾಗದಿರುವ ಕಾರಣ ಇದು ವಿಳಂಬವಾಗಿದೆ ಎಂದು ಹೇಳಿದ್ದಾರೆ. ಈಗ ಅದು ಇತ್ಯರ್ಥವಾಗಿದೆ. ಇಲ್ಲಿ ಕಾನೂನು ಪಾಸ್ ಆಗಿದೆ. ಆದರೆ ಕಾನೂನು ಸಚಿವರು ಆ ಬಿಲ್‌ನ್ನು ಮೂವ್ ಮಾಡುವ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ಕಾನೂನು ಊರ್ಜಿತವಾಗುತ್ತದೆ ಎಂಬುದರ ಬಗ್ಗೆ ಕಷ್ಟ ಎಂಬ ಅನುಮಾನವನ್ನು ವ್ಯಕ್ತ ಮಾಡಿದ್ದಾರೆ. ಹೀಗಿರುವುದರಿಂದ ವಿಷಯವು ನ್ಯಾಯಾಲಯದ ಮುಂದೆ ಹೋದರೆ, ಏನಾಗುತ್ತದೆಂಬ ಅನುಮಾನ ನಮಗೂ ಇದೆ. ಅಂಥ ಅನುಮಾನವಿಲ್ಲವೆಂದು ನಾನು ಹೇಳುವುದಿಲ್ಲ. ಇಲ್ಲಿಯವರೆಗೂ ಅದು ನ್ಯಾಯಾಲಯದ ಮುಂದೆ ಹೋಗಿಲ್ಲ, ಯಾರೂ ಅದನ್ನು ಪ್ರಶ್ನೆ ಮಾಡಿಲ್ಲ. ಒಂದು ವೇಳೆ ಯಾರಾದರೂ ಪ್ರಶ್ನೆ ಮಾಡಿ ಊರ್ಜಿತವಾದರೆ ಬಹಳ ಸಂತೋಷವಾಗುತ್ತದೆ. ಒಂದು ವೇಳೆ ಅದು ಅನೂರ್ಜಿತವಾದಲ್ಲಿ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಲ್ಲಿ ತೊಂದರೆಯುಂಟಾಗುತ್ತದೆ. ತಾವುಗಳು ಈ ಬಗ್ಗೆ ಯುದ್ಧೋಪಾದಿಯಲ್ಲಿ ಎಲ್ಲಾ ಇಲಾಖಾ ಕಾರ್ಯದರ್ಶಿಯವರನ್ನು ಕರೆಸಿ ಚರ್ಚಿಸಿದ್ದೇನೆ ಎಂದು ಹೇಳಿದ್ದೀರಿ. ಅವರಿಂದ ವಿವರಗಳನ್ನು ಪಡೆಯಲು ಕೆಲಸ ಕಾರ್ಯಗಳನ್ನು ಮಾಡಿದ್ದೇನೆ ಎಂದು ಕೂಡ ತಿಳಿಸಿರುತ್ತೀರಿ. ತಾವುಗಳು ಆ ರೀತಿಯಾಗಿ ಹೇಳಿದರೆ ನಮ್ಮ ಅಧಿಕಾರಿ ಶಾಹಿ ವರ್ಗದವರು ಅಷ್ಟು ಸುಲಭವಾಗಿ ಜಗ್ಗುವುದಿಲ್ಲ. ತಾವು ಇದಕ್ಕೆ ಕೊನೆಯ ತಾರೀಕೊಂದನ್ನು ನಿಗದಿಪಡಿಸಬೇಕು. ಒಂದು ಟೈಂಟೇಬಲ್‌ನ್ನು ಹಾಕಿ ಇಂಥ ದಿನಾಂಕದೊಳಗಾಗಿ ನೀವು ಉತ್ತರಿಸಬೇಕೆಂದು ಆದೇಶಿಸಿ ಯಾರು ಇಂಥ ದಿನಾಂಕದೊಳಗೆ ತಮ್ಮ ವಿವರಗಳನ್ನು ಕೊಡುವುದಿಲ್ಲವೋ ಅಂಥವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ತಿಳಿಸಿ. ಅದರ ಜೊತೆಗೆ ಸಂಬಂಧಪಟ್ಟವರ ಸರ್ವೀಸ್ ರಿಜಿಸ್ಟರ್‌ನಲ್ಲಿಯೂ ಇದನ್ನು ನಮೂದು ಮಾಡುತ್ತೇವೆಂಬ ಅಂಶವನ್ನು ತಿಳಿಸಿರಿ. ಇಂಥ ಕಠಿಣವಾದ ನಿರ್ಬಂಧಗಳನ್ನು ತಾವುಗಳು ಅವರ ಮೇಲೆ ಹೇರಿದರೆ ತಾವುಗಳು ಉತ್ತರವನ್ನು ಪಡೆಯಬಹುದಾಗಿದೆ. ಇಲ್ಲವಾದಲ್ಲಿ ಉತ್ತರ ಸಿಗುವುದಿಲ್ಲ. ಹೀಗೆ ಉತ್ತರ ಸಿಗದಿರತಕ್ಕಂಥ ಸಂದರ್ಭದಲ್ಲಿ ಪುನಃ ನ್ಯಾಯಾಲಯದಲ್ಲಿ ಪ್ರತಿರೋದವಾದ ತೀರ್ಪು ಬಂದರೆ ಪುನಃ ಇದು ಹಾಗೆಯೇ ಉಳಿದುಕೊಳ್ಳುವ ಪರಿಸ್ಥಿತಿ ಬಂದೀತು. ಅದಕ್ಕಾಗಿ ತಾವುಗಳು ಹಾಗಾಗದಿರಲು ಅವಕಾಶ ಮಾಡಿಕೊಡಬೇಡಿ ಎಂಬ ಮನವಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರಲ್ಲಿ ಈ ವಿಚಾರಗಳನ್ನು ವ್ಯಕ್ತಪಡಿಸಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಿಯಮ 73ರ ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮತ್ತು ಸರ್ಕಾರದ ಗಮನವನ್ನು ಈ ವಿಚಾರದಲ್ಲಿ ಸೆಳೆಯ ಬಯಸಿದ್ದೇವೆ. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ವಿಚಾರದಲ್ಲಿ ಇದೊಂದು ಮಹತ್ವವಾಗಿರತಕ್ಕಂಥ ವಿಚಾರವಾಗಿದೆ. ಹಾಗೆಯೇ ಅನೇಕ ವರ್ಷಗಳಿಂದ ಈ ಬಗ್ಗೆ ಕಾನೂನಿನ ಜಟಿಲತೆಗಳು ಕೂಡ ಸಿಕ್ಕಹಾಕಿಕೊಂಡಿದ್ದಾವೆ. ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ರೀತಿಯಲ್ಲಿ ಬೇರೆ ಬೇರೆ ಕೋರ್ಟ್‌ಗಳಲ್ಲಿ ವ್ಯಾಜ್ಯಗಳು ಆಗಿ ಕೋರ್ಟ್‌ಗಳು ನೀಡಿರತಕ್ಕಂಥ ತೀರ್ಪುಗಳ ಮೇರೆಗೆ ಸರ್ಕಾರಗಳು ಮಾಡಿರತಕ್ಕಂಥ ಆಜ್ಞೆಗಳ ಹಿನ್ನಲೆಯಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬಹಳ ಚಿಂತನೆಯನ್ನು ನಡೆಸಿ, ಎಲ್ಲಾ ವರ್ಗಗಳ ಜನರಿಗೂ

ನ್ಯಾಯವನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೃಷ್ಟಿ ಮಾಡಿದ್ದೆವು. ದುರದೃಷ್ಟದಿಂದ ತಾವೇ ಒಪ್ಪಿಕೊಂಡ ಹಾಗೆ ಇದನ್ನು ರಿಕ್ರೂಟ್‌ಮೆಂಟ್ ಮಾಡುವ ವಿಚಾರದಲ್ಲಿ ಸಾಕಷ್ಟು ವಿಳಂಬವಾಗಿದೆ. ವಿಳಂಬಕ್ಕೆ ನಾವು ಕಾರಣಗಳನ್ನು ಕೇಳದೆ ಮತ್ತಷ್ಟು ವಿಳಂಬಕ್ಕೆ ಅವಕಾಶ ಮಾಡಿಕೊಡಬಾರದೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಬಯಸುತ್ತೇವೆ. ಇದಕ್ಕೆ ಆರ್ಥಿಕ ಇಲಾಖೆಯ ನಿಬಂಧನೆಗಳು ಒಳಪಡುತ್ತವೆಯೋ ಇಲ್ಲವೋ ಎಂಬುದನ್ನು ತಾವುಗಳು ತಿಳಿಸಬೇಕು. ನಾವು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುತ್ತೇವೆಂದು ಒಂದು ಕಡೆಯಲ್ಲಿ ಹೇಳಿದ್ದೇವೆ. ಇದರಿಂದ ಆ ವರ್ಗದ ಜನರಿಗೆ ಸಮಾಧಾನ ಪಡಿಸುತ್ತೇವೆ. ಇನ್ನೊಂದು ಕಡೆಯಲ್ಲಿ ಆರ್ಥಿಕ ಇಲಾಖೆಯ ನಿರ್ಬಂಧನೆಯನ್ನು ಹಾಕಿರುವುದರಿಂದಾಗಿ ತುಂಬಿಕೊಳ್ಳುವುದಿಲ್ಲವೆಂದು ಹೇಳುವುದು ಇದೆ. ಆದ್ದರಿಂದ ಇವೆರಡು ಸಹಿತ ಸರಿಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ಬಗ್ಗೆ ಸ್ಪಷ್ಟಣೆ ನೀಡಬೇಕು. ಇದಕ್ಕೆ ಸರ್ಕಾರದವರು ಒಂದು ಗಡುವನ್ನು ನಿಗದಿ ಮಾಡಬೇಕು. ಅದರ ಮೂಲಕ ಇಂಥಿಂಥ ಇಲಾಖೆಯಲ್ಲಿ ಇಂತಿಷ್ಟು ಹುದ್ದೆಗಳನ್ನು ಅವಶ್ಯಕತೆಗನುಗುಣವಾಗಿ ಇಂತಿಷ್ಟು ವರ್ಷಗಳಲ್ಲಿ ಈ ಹುದ್ದೆಗಳನ್ನು ತುಂಬಿಕೊಳ್ಳುತ್ತೇವೆಂದು ಹೇಳಿ. ಮಾನ್ಯ ಸೋಮಶೇಖರ್‌ರವರು ನಮ್ಮ ಸರ್ಕಾರದಲ್ಲಿದ್ದಾಗ ಈ ಬಗ್ಗೆ ಬಹಳ ಆಳವಾಗಿ ಅಧ್ಯಯನ ಮಾಡಿ ಅವರ ಮೂಲಕ ಸರ್ಕಾರಿ ಆಜ್ಞೆಯನ್ನು ಮಾಡಿಸಿದ್ದೇವೆ. ಅದರಲ್ಲಿ ಯಾವುದೇ ಕೋರ್ಟ್‌ಗೆ ಹೋದರೂ ಕೂಡ ಅದು ಊರ್ಜಿತವಾಗಿರಬೇಕೆಂದು ನಿಯಮಗಳನ್ನು ಅಳವಡಿಸಿದ್ದೇವೆ. ಆದ್ದರಿಂದ ಇದನ್ನು ವಿಳಂಬವಿಲ್ಲದೆ ತುಂಬಲು ಒಂದು ಕಾಲಮಿತಿಯನ್ನು ನಿಗದಿ ಮಾಡಲು ಸರ್ಕಾರವು ಬಯಸುತ್ತದೆಯೇ? ಎಂಬ ಸ್ಪಷ್ಟೀಕರಣವನ್ನು ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕೆಲಸವನ್ನು ನಾವು ಕಾಲಬದ್ಧವಾಗಿ ಮಾಡಬೇಕೆಂಬುದು ನಿಜ. ಆ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಕಾಲಮಿತಿಯನ್ನು ನಿರ್ಧರಿಸಿ ಈ ಕೆಲಸವನ್ನು ನಾವು ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎಂಬ ಭರವಸೆಯನ್ನು ಈ ಸದನದ ಮೂಲಕ ಕೊಡಬಯಸುತ್ತೇವೆ. ಸಾಮಾಜಿಕವಾಗಿ ಇವರಿಗೆ ಸಿಗಬೇಕಾಗಿದ್ದ ನ್ಯಾಯವು ಸಿಗದೇ ವಂಚಿತರಾಗಿದ್ದರು, ಈ ಸಂದರ್ಭದಲ್ಲಿ ಆರ್ಥಿಕ ಇಲಾಖೆಯಿಂದಲೂ ಯಾವುದೇ ಅಡಚಣೆಗಳು ಬಾರದ ರೀತಿಯಲ್ಲಿ ಅವರಿಗೆ ಸಿಗಬೇಕಾದಂಥ ಸೌಲಭ್ಯಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ಕಾಲಬದ್ಧವಾಗಿ ಮಾಡಿಯೇ ಮಾಡುತ್ತೇವೆ ಎಂಬ ವಿಚಾರವನ್ನು ಹೇಳಬಯಸುತ್ತೇವೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರವಿದ್ದಾಗ 1997ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಗೈಡ್‌ಲೈನ್ಸ್ ಇಶ್ಯೂ ಮಾಡಿದ್ದರೂ ಕೂಡ ಇಂದಿನವರೆಗೂ ಒಂದಲ್ಲ ಒಂದು ಕಾರಣವನ್ನು ಒಡ್ಡಿ, ಮುಂದಕ್ಕೆ ಹೋಗುತ್ತಾ ಇದ್ದಾರೆ.

1.00 ಪಿ.ಎಂ.

ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದಂತೆ ಇನ್ನೊಂದು ಕಾರಣದ ಮೇಲೂ ಅದು ಮುಂದಕ್ಕೆ ಹೋಗಬಹುದು. ಇನ್ನೊಂದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಆರ್ಥಿಕ ಇಲಾಖೆಯಲ್ಲೇ ಪ್ರಮೋಶನ್ಸ್ ಐದಾರು ತಿಂಗಳಿಂದ ಬಾಕಿ ಇದೆ. ಹೀಗಿರುವಾಗ ಬೇರೆ ಇಲಾಖೆಗಳಿಗೆ ಆ ಇಲಾಖೆ ಹೇಗೆ ಅನುಮತಿ ಕೊಡುತ್ತದೆ? ಆದ್ದರಿಂದ ಇನ್ನು ತಡ ಆಗುವುದು ಬೇಡ. ಇಷ್ಟು ದಿವಸದೊಳಗೆ ಮಾಡುತ್ತೇವೆ ಎಂಬ ಕಾಲಮಿತಿ ಹಾಕಿಕೊಡಬೇಕು. ಶೀಘ್ರಗತಿ ಎಂಬುದು ಮಾಮೂಲಿ ಉತ್ತರ. ಆಮೇಲೆ ಇನ್ನೊಂದು, 1983ರಲ್ಲಿ ಜನತಾ ಸರ್ಕಾರ ಬಂದ ಕೂಡಲೇ ರ್ಯಾಂಕ್‌ಹೋಲ್ಡರ್ಸ್‌ಗೆ ನೇರ ನೇಮಕಾತಿ ಮಾಡುವ ಒಂದು ಆದೇಶ ಹೊರಡಿಸಿತ್ತು. ಕೆಲವು ಇಲಾಖೆಗಳಲ್ಲಿ ಆ ನೇಮಕಾತಿ ಆಗಿಲ್ಲ. ಸೆಲೆಕ್ಷನ್ ಆಗಿದೆ, ಯಾವ್ಯಾವ ಇಲಾಖೆಗೆ ಅವರನ್ನು ನೇಮಿಸಬೇಕೆಂಬ ಪ್ರಸ್ತಾಪವಿದ್ದರೂ ಅದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೇ ಈ ವಿಚಾರದಲ್ಲಿ ಯಾರೂ ಸಂಶಯಪಡಬೇಕಾದ ಅಗತ್ಯವೇ ಇಲ್ಲ. ಸದಸ್ಯರುಗಳಿಗೆ ಎಷ್ಟು ಆಸಕ್ತಿ ಇದೆಯೋ ಅದಕ್ಕೂ ಒಂದು ಹೆಜ್ಜೆ ಮುಂದೆಹೋಗುವಂಥ ಆಸಕ್ತಿ ನಮಗೂ ಇದೆ, ತಾವು ಹೇಳಿದಂತೆ ಕಾಲಮಿತಿ ಇಟ್ಟುಕೊಂಡೇ ಮಾಡಬೇಕಾಗುತ್ತದೆ. ಏಕೆಂದರೆ ಗ್ರಾಮೀಣ ಕೃಪಾಂಕದ ಕಾನೂನು ಯಾವುದೇ ಕಾರಣಕ್ಕಾಗಿ ಕೋರ್ಟಿನಲ್ಲಿ ಅಸಿಂಧು ಅಂತ ತಡವಾಗುವ ಸಂಭವ ಉಂಟು. ಆ ದೃಷ್ಟಿಯಿಂದ ಯಾವುದೇ ಅಡಚಣೆ ಬಂದರೂ ನಿವಾರಣೆ ಮಾಡಿಕೊಂಡು, ಅದಕ್ಕೆ ಪ್ರತಿ ಇಲಾಖೆ ಮಟ್ಟದಲ್ಲೂ ಒಂದು ಅಥಾರಿಟಿ ಸೃಷ್ಟಿಸಿ ಅದರ ಮೂಲಕ ನೇರ ನೇಮಕಾತಿ ಮಾಡಲಾಗುವುದು, ಸಾಧ್ಯವಾದಷ್ಟು ನಮ್ಮ ಟೀಚರ್‌ಗಳ ನೇಮಕಾತಿ ಮಾಡುವಾಗ ಇಂಟರ್‌ವ್ಯೂ ಬಿಟ್ಟು ಕೇವಲ ಅಂಕಗಳನ್ನೇ ಆಧರಿಸಿ ಸರಳವಾಗಿ ಮಾಡುತ್ತಿರುವಂತೆ ಬೇಗ ಮಾಡುವ ಕೆಲಸ ಮಾಡುತ್ತೇವೆ. ಇದರಲ್ಲಿ ಹಿಂದೆ ಹೋಗುವುದಿಲ್ಲ, ಹಾಗೆ ಹೋಗುವ ಅಗತ್ಯವೂ ಇಲ್ಲ.

ಶ್ರೀ ಬಿ. ಸೋಮಶೇಖರ್: ಮುಖ್ಯಮಂತ್ರಿಗಳ ಇಲಾಖೆ ಅರ್ಥ ಇಲಾಖೆಯಲ್ಲಿ ಪ್ರಮೋಶನ್ಸ್ 6 ತಿಂಗಳಿಂದ ಬಾಕಿ ಇದೆ, ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ: ಈಗಾಗಲೇ ಸಚಿವ ಸಂಪುಟ ತೀರ್ಮಾನ ಮಾಡಿ ಸರ್ಕಾರಿ ಆಜ್ಞೆ ಹೊರಟಿದೆ. ಈಗ ಗುಲ್ಬರ್ಗಾದಲ್ಲಿ ಪರಿಶಿಷ್ಟ ಜಾತಿ ಪಂಗಡಗಳ ಇಂಜಿನಿಯರಿಂಗ್ ಅಭ್ಯರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನಾನು ನಿನ್ನೆ ರಾತ್ರಿ ಅವರ ಜೊತೆ ಸಂಪರ್ಕ ಮಾಡಿ ಈಗಾಗಲೇ ಸರ್ಕಾರ ತೀರ್ಮಾನ ಮಾಡಿ ಕ್ರಮ ಪ್ರಾರಂಭಿಸಿರುವುದರಿಂದ ನೀವು ಉಪವಾಸ ಸತ್ಯಾಗ್ರಹ ಮಾಡುವುದರಲ್ಲಿ ಅರ್ಥವೇ ಇಲ್ಲ. ದಯವಿಟ್ಟು ಅದನ್ನು ವಾಪಸ್ ತೆಗೆದುಕೊಳ್ಳಿ. ನಿಮ್ಮ ಪರವಾಗಿ ನಾವೇ ನಿಮ್ಮ ಕೆಲಸ ಮಾಡುತ್ತೀರಬೇಕಾದರೆ ನೀವು ಉಪವಾಸ ಮಾಡುವುದರಲ್ಲಿ ಅರ್ಥವಿಲ್ಲವೆಂದು ನಾನು ಅವರಿಗೆ ಮನವರಿಕೆ ಮಾಡಿದ್ದೇನೆ. ಈ ವೇದಿಕೆ ಮೂಲಕ ಅವರಲ್ಲಿ ನಾನು ಪುನಃ ವಿನಂತಿ ಮಾಡಿಕೊಳ್ಳುತ್ತೇನೆ: ನೀವು ದಯವಿಟ್ಟು ಉಪವಾಸ ಸತ್ಯಾಗ್ರಹ ವಾಪಸ್ ಪಡೆಯಿರಿ. ನಿಮಗೇನಾದರೂ ಸಂಶಯವಿದ್ದರೆ ಇಲ್ಲಿಗೆ ಬನ್ನಿರಿ, ಚರ್ಚೆ ಮಾಡೋಣ.